## ಹೂದಾನಿಯಾಗಿ ಮದ್ದಿನ ಕವಚ

ಯುದ್ಧ ಮಾಡುವಾಗ ಸೈನಿಕರು ಶತ್ರುಗಳನ್ನು ಸಂಹರಿಸಲು ಗುಂಡು ಹಾರಿಸಿದಾಗ ಉಳಿದ ಮದ್ದಿನ ಹಿತ್ತಾಳೆ ಕವಚವಿದು. ತುಪಾಕಿ ಹಾರಿಸಿದಾಗ ಗುಂಡು ಮುಂದೆ ಹೋಗಿ ಹೊರಗಡೆಯ ಹಿತ್ತಾಳೆ ಚಿಪ್ಪು ಹಿಂದೆ ಉಳಿಯುತ್ತದೆ. ಅದನ್ನು ಮನೆಯಲ್ಲಿ ಸಿಂಗಾರಕ್ಕೆ ಬಳಸಿದ್ದಾರೆ.

**-ಚಂದ್ರಿಕ ಕೃಷ್ಣ, ಬೆಂಗಳೂರು**





## ಎಣ್ಣೆ ಗಾಣ

ಕ್ರಿ.ಪೂ. 1500ರಷ್ಟು ಹಿಂದೆಯೇ ಎಣ್ಣೆ ಗಾಣವಿತ್ತೆಂದು ಋಗ್ವೇದದಿಂದ ತಿಳಿದು ಬರುತ್ತದೆ. ಯಂತ್ರಗಳು ಬರುವ ಮುನ್ನ ಸಾವಿರಾರು ವರ್ಷಗಳ ಕಾಲ ದೇಶದ ಎಣ್ಣೆ ಅವಶ್ಯಕತೆಯನ್ನು ಪೂರೈಸಿದ ಎಣ್ಣೆ ಗಾಣ ಇಂದು ಕೆಲಸವಿಲ್ಲದೆ ಖಾಲಿ ನಿಂತಿದೆ. ಎತ್ತಿನ ಸಹಾಯದಿಂದ ನಡೆಯುತ್ತಿದ್ದ ಈ ಎಣ್ಣೆ ಗಾಣ ಆಧುನಿಕ ಭರಾಟೆಗೆ ಮೂಲೆ ಗುಂಪಾಗಿದೆ. ಈ ಎಣ್ಣೆ ಗಾಣ ಹುನಗುಂದ ತಾಲ್ಲೂಕಿನ ಧನ್ನೂರ ಗ್ರಾಮದ ಪಂಚಾಕ್ಷರಯ್ಯ ಹಿರೇಮಠ ಅವರ ಮನೆಯಲ್ಲಿ ಇದೆ.

**-ಮಹಾಂತೇಶ ಬಾಗೇವಾಡಿ, ಚೊಳಚಗುಡ್ಡ**

## ತಟ್ಟೆ ಗೂಡಿನೊಳಗೆ ಮೊಟ್ಟೆ

ತಟ್ಟೆಯ ಆಕಾರದ ಈ ಪಕ್ಷಿ ಗೂಡಿನೊಳಗೆ ಮೊಟ್ಟೆಗೆ ಅಷ್ಟೇನೂ ರಕ್ಷಣೆ ಇಲ್ಲ. ಒಂದು ರೀತಿಯ ಕಪ್ಪು ಬಣ್ಣ, ಬಿಳಿಯ ಗೆರೆ ಹೊಂದಿರುವ ಈ ಪಕ್ಷಿಯು ಗೂಡು ಕಟ್ಟುವುದೇ ಹಾಗೆ. ತಳಭಾಗ ಅರ್ಧ ಸುತ್ತಳತೆಯ ಗೂಡಿಗೆ ಮೇಲ್ಭಾಗವಿಲ್ಲ. ಮೇಲಿನಿಂದ ಮಳೆ ಹನಿಗಳು ಬೀಳುತ್ತಿರುತ್ತವೆ. ಗಿಡಗಂಟಿಗಳಲ್ಲಿ ಹರಿದಾಡುವ ಹಾವಿಗೆ ಮೊಟ್ಟೆ ನುಂಗುವುದೂ ಸುಲಭ. ಆದರೂ ತಾಯಿ ಪಕ್ಷಿ ಆಗಾಗ ಹಾರಿ ಬಂದು ಮೊಟ್ಟೆಗೆ ಕಾವು ನೀಡುತ್ತಿರುತ್ತದೆ. ಒಟ್ಟಿನಲ್ಲಿ ಪ್ರಕೃತಿಯೇ ಈ ಮೊಟ್ಟೆಗೆ ರಕ್ಷಣೆ ನೀಡಬೇಕು. ಪಕ್ಷಿಯ ಗೂಡನ್ನು ಕಲಾತ್ಮಕವಾಗಿ ನಿರ್ಮಿಸಿದ್ದರೂ ಗೂಡಿನ ಮೇಲ್ಭಾಗ ತೆರೆದಿರುವುದೇತಕೊ?

**-ಹುಕ್ಲಕ್ಕೆ ಗುರುನಾಥ ಹೆಗಡೆ, ಕಾನಸೂರು**

